ಚಲಿಸುವಂಥ ವಾಹನಗಳನ್ನು ತಡೆಯುವುದು ಒಂದು, ಮತ್ತೆ ಈಗಾಗಲೇ ಕೊಂಕಣ್ ರೈಲ್ವೆ ಪ್ರಾರಂಭವಾಗಿದೆ. ಈಗೇನು ಎರಡು ನಿಮಿಷಗಳಿಗೊಮ್ಮೆ ಬಸ್ಸು ಓಡಾಡುತ್ತದೆ. ಅದನ್ನು ಕಡಿಮೆ ಮಾಡಿ ಕೊಂಕಣ ರೈಲ್ವೇ ಸ್ಟೇಷನ್ನಿಗೆ ಡೈವರ್ಟ್ ಮಾಡುವಂಥ ಯೋಜನೆಯನ್ನು ಹಾಕಿಕೊಂಡರೆ ಈ ಅಫಘಾತಗಳ ಪೈಪೋಟಿ ಏನು ಇದೆ ಅದು ಕಡಿಮೆಯಾಗುತ್ತದೆ ಎಂದು ನಾನು ಸಲಹೆ ಕೊಡಬಯಸುತ್ತೇನೆ.

ಶ್ರೀ ಪಿ.ಜಿ.ಆರ್. ಸಿಂಧ್ಯಾ : ಅದನ್ನು ಪರಿಶೀಲನೆ ಮಾಡುತ್ತೇನೆ.

ಶ್ರೀ ಎಂ.ಎಂ. ಜಯರಾಮ ಶೆಟ್ಟಿ : ದಕ್ಷಿಣ ಕನ್ನಡ ರಾಷ್ಟ್ರೀಯ ಹೆದ್ದಾರಿ 17ರಲ್ಲಿ ವಾಹನ ದಟ್ಟಣೆ ಮತ್ತು ಜನಸಂಖ್ಯೆ ಕೂಡ ಸುಮಾರು ವರ್ಷದಿಂದ ವಿಪರೀತವಾಗಿ ಬೆಳೆದಿದೆ. ಇದರಿಂದ ಅಪಘಾತಗಳು ಜಾಸ್ತಿ ಆಗುತ್ತಿದೆ. ಇದಕ್ಕಾಗಿ ಈಗಾಗಲೇ ಜಿಲ್ಲಾಧಿಕಾರಿಗಳಿಂದ ನಮ್ಮ ಜಿಲ್ಲಾ ವತಿಯಿಂದ ಸರ್ಕಾರಕ್ಕೆ ಒಂದು ನಿವೇದನೆಯನ್ನು ಸಲ್ಲಿಸಿದ್ದೇವೆ. ಈ ರಾಷ್ಟ್ರೀಯ ಹೆದ್ದಾರಿಯನ್ನು ದ್ವಿಮುಖ ರಸ್ತೆಯನ್ನಾಗಿ ಮಾಡಬೇಕೆಂದು ನಾನು ಸರ್ಕಾರವನ್ನು ಒತ್ತಾಯ ಮಾಡುತ್ತಿದ್ದೇನೆ. ರಾಷ್ಟ್ರೀಯ ಹೆದ್ದಾರಿ 17ನ್ನು ದ್ವಿಮುಖ ರಸ್ತೆಯನ್ನಾಗಿ ಮಾಡಿಕೊಂಡರೆ ನಮ್ಮ ಕರಾವಳಿ ಪ್ರದೇಶಗಳಿಗೆ ತುಂಬ ಅನುಕೂಲವಾಗುತ್ತದೆ. ಇದನ್ನು ಸರ್ಕಾರ ಪರಿಶೀಲಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಅಧ್ಯಕ್ಷರು : ಪರಿಶೀಲನೆ ಮಾಡುತ್ತಾರೆ.

ಶ್ರೀ ಪಿ.ಜಿ.ಆರ್. ಸಿಂಧ್ಯಾ : ಇದರ ಇತಿಮಿತಿಯನ್ನು ಅರ್ಥಮಾಡಿಕೊಂಡು ವಿಚಾರ ಮಾಡುತ್ತೇವೆ.

ಅಧ್ಯಕ್ಷರು : ಪ್ರಶ್ನೆ 71 (638)ಕ್ಕೆ ಸರ್ಕಾರದವರು ಕಾಲಾವಕಾಶವನ್ನು ತೆಗೆದುಕೊಂಡಿದ್ದಾರೆ.

ಗಡಿ ತಾಲ್ಲೂಕುಗಳಲ್ಲಿ ಕಳ್ಳ ಸಾಗಾಣಿಕೆ

72 - ಶ್ರೀರಾಮರೆಡ್ಡಿ (ಬಾಗೇಪಲ್ಲಿ) : ಮಾನ್ಯ ಅಬಕಾರಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ

ಅ) ರಾಜ್ಯದ ಗಡಿ ತಾಲ್ಲೂಕುಗಳಿಂದ ನೆರೆರಾಜ್ಯವಾದ ಆಂಧ್ರಕ್ಕೆ ಸಾರಾಯಿ ಕಳ್ಳಸಾಗಾಣಿಕೆಯಾಗುತ್ತಿರುವುದರ ಬಗ್ಗೆ ಸರ್ಕಾರದ ಗಮನಕ್ಕೆ ಬಂದಿದೆಯೇ? ಬಂದಿದ್ದಲ್ಲಿ ಇದನ್ನುತಡೆಗಟ್ಟಲು ಕೈಗೊಂಡಕ್ರಮಗಳೇನು?

ಶ್ರೀ ತಿಪ್ಪೇಸ್ವಾಮಿ (ಅಬಕಾರಿ ಸಚಿವರು) :

ಅ) ಆಂಧ್ರಪ್ರದೇಶದ ಗಡಿಭಾಗದ ಜಿಲ್ಲೆಗಳಾದ ಗುಲ್ಬರ್ಗಾ,ಬೀದರ್, ರಾಯಚೂರು, ಚಿತ್ರದುರ್ಗ, ತುಮಕೂರು ಮತ್ತು ಕೋಲಾರ ಜಿಲ್ಲೆಗಳಲ್ಲಿ ನೆರೆ ರಾಜ್ಯವಾದ ಆಂಧ್ರಕ್ಕೆ ಸಾರಾಯಿ ಕಳ್ಳ ಸಾಗಾಣಿಕೆಯಾಗುತ್ತಿರುವುದರ ಬಗ್ಗೆ ಯಾವುದೇ ಪ್ರಕರಣಗಳು ಗಮನಕ್ಕೆ ಬಂದಿರುವುದಿಲ್ಲ. ಒಂದು ಜಿಲ್ಲೆಯಾದ ಬಳ್ಳಾರಿಯಲ್ಲಿ 3 ಪ್ರಕರಣಗಳು ಕಂಡುಬಂದಿದ್ದು ಅಬಕಾರಿ ಕಾಯ್ದೆ 1965ರನ್ವಯ ಮೊಕದ್ದಮೆಗಳನ್ನು ದಾಖಲು ಮಾಡಲಾಗಿರುತ್ತದೆ.

ಶ್ರೀ ಬಿ. ವಿ. ಶ್ರೀರಾಮರೆಡ್ಡಿ : ಮಾನ್ಯ ಅಧ್ಯಕ್ಷರೆ, ಮಾನ್ಯ ಸಚಿವರು ಉತ್ತರದಲ್ಲಿ ಆಂಧ್ರಪ್ರದೇಶದ

ಗಡಿ ಭಾಗದ ಜಿಲ್ಲೆಗಳಾದ ಗುಲ್ಬರ್ಗಾ, ಬೀದರ್, ರಾಯಚೂರು, ಚಿತ್ರದುರ್ಗ, ತುಮಕೂರು ಮತ್ತು ಕೋಲಾರ ಜಿಲ್ಲೆಗಳಲ್ಲಿ ನೆರೆ ರಾಜ್ಯವಾದ ಆಂಧ್ರಕ್ಕೆ ಸಾರಾಯಿ ಕಳ್ಳ ಸಾಗಾಣಿಕೆಯಾಗುತ್ತಿರುವುದರ ಬಗ್ಗೆ ಯಾವುದೇ ಪ್ರಕರಣಗಳು ಗಮನಕ್ಕೆ ಬಂದಿರುವುದಿಲ್ಲ. ಒಂದು ಜಿಲ್ಲೆಯಾದ ಬಳ್ಳಾರಿಯಲ್ಲಿ ಮೂರು ಪ್ರಕರಣಗಳು ಕಂಡು ಬಂದಿದೆ ಎಂದು ಹೇಳಿ ಉತ್ತರವನ್ನು ಕೊಟ್ಟಿದ್ದಾರೆ. ಆದರೆ ನನಗೆ ಮಾಹಿತಿ ಇರುವ ಪ್ರಕಾರ, ಕೋಲಾರ ಜಿಲ್ಲೆಯಲ್ಲಿರುವ ಸುಮಾರು ಆರು ತಾಲ್ಲೂಕುಗಳು ಅದರಲ್ಲಿ ಒಂದೋಂದು ತಾಲ್ಲೂಕುಗಳಿಂದ ಒಂದು ಲಕ್ಷ ಬೆಲೆ ಬಾಳುವಂತದ ಸಾರಾಯಿ ಪ್ರತಿ ದಿವಸ ಹೋಗುತ್ತಾ ಇದೆ. ಡಿಸೆಂಬರ್ ತಿಂಗಳ ಮೊದಲ ವಾರದಲ್ಲಿ ಆಂಧ್ರಪ್ರದೇಶಕ್ಕೆ ಹೋಗುತ್ತಿದ್ದ ಒಂದು ಜೀಪನ್ನು ಹಿಡಿದು ಬೆಂಕಿ ಹಾಕಿ ಸುಟ್ಟುಹಾಕಿದಂತಹ ಪ್ರಕರಣ ಬಾಗೇಪಲ್ಲಿಯಲ್ಲಿ ಆಗಿರುವುದು ಪತ್ರಿಕೆಗಳಲ್ಲಿ ಬಂದಿದೆ. ಇದು ಸರ್ಕಾರದ ಗಮನಕ್ಕೂ ಬಂದಿದೆ. ಗೌರಿಬಿದನೂರು ನನ್ನ ಕ್ಷೇತ್ರಕ್ಕೆ ಬರುವಂತಹ ಒಂದು ಹಳ್ಳಿಯಲ್ಲಿ ಹೋಗುತ್ತಿರುವಂತಹ ಜೀಪನ್ನು ಹಿಡಿದು ಸುಟ್ಟು ಹಾಕಿದ್ದಾರೆ. ಹಾಗೆ 1994ರ ಕೊನೆಯ ಭಾಗದಲ್ಲಿ ಕಳ್ಳಸಾರಾಯಿ ತಯಾರು ಮಾಡುತ್ತಿದ್ದಂತಹ 20 ಲಕ್ಷ ರೂಪಾಯಿಗಳ ಬೆಲೆ ಬಾಳುವಂತಹ ಮಿಷನರಿಗಳನ್ನು ಮುಳಬಾಗಿಲು ತಾಲ್ಲೂಕಿನಲ್ಲಿ ಅಧಿಕಾರಿಗಳು ಎಕ್ಸೈಜ್ ಇನ್ಸ್‌ಪೆಕ್ಟರ್, ಸಬ್ ಇನ್ಸ್‌ಪೆಕ್ಟರ್‌ರವರು ಅದನ್ನು ವಶಪಡಿಸಿಕೊಂಡು ಕಳ್ಳತನದಿಂದ ಆಂಧ್ರಪ್ರದೇಶದ ಕಡೆಗೆ ಸಾಗಿಸುವಂತಹ ಸಂದರ್ಭದಲ್ಲಿ ಅದನ್ನು ಆಂಧ್ರಪ್ರದೇಶದ ಪೋಲೀಸರು ಹಿಡಿದು ಕೇಸ್ ಹಾಕಿ ಸೀಜ್ ಮಾಡಿದ್ದಾರೆ. ಇದರ ಬಗ್ಗೆ ಇದುವರಗೂ ಸರ್ಕಾರದವರು ಏನು ಕ್ರಮವನ್ನು ತೆಗೆದುಕೊಂಡಿಲ್ಲ. ಈಗಲೂ ಆ ಎಕ್ಸೈಜ್ ಸರ್ಕಲ್ ಇನ್ಸ್‌ಪೆಕ್ಟರ್ ಮತ್ತು ಸರ್ಕಲ್ ಇನ್ಸ್‌ಪೆಕ್ಟರ್ ಮುಳಬಾಗಿಲಲ್ಲಿ ಕೆಲಸ ಮಾಡುತ್ತಿದ್ದಾರೆ. ಇದುವರೆಗೂ ಅವರ ಮೇಲೂ ಕ್ರಮ ತೆಗೆದುಕೊಂಡಿಲ್ಲ. ಇಂತಹ ಸಂದರ್ಭದಲ್ಲಿ ಸರ್ಕಾರದ ಗಮನಕ್ಕೆ ತರುವುದೆನೆಂದರೆ ಇದು ಬೇಜವಾಬ್ದಾರಿಯ ಉತ್ತರವಾಗುತ್ತದೆ. ನಮ್ಮ ಜಿಲ್ಲೆಯಲ್ಲಿ ನಮ್ಮ ಕ್ಷೇತ್ರದಲ್ಲಿ ಸಾರಾಯಿ ಸಾಕಷ್ಟು ಹೋಗುತ್ತಾ ಇದೆ.

ಅಧ್ಯಕ್ಷರು : ಈಗ ನಾವೇ ಒಂದು ಇತ್ಯರ್ಥಕ್ಕೆ ಬರೋಣ. ಅವರು ಉತ್ತರವನ್ನು ಸಮರ್ಪಕವಾಗಿ ಕೊಟ್ಟಿಲ್ಲ. ನಿಮ್ಮ ಹತ್ತಿರ ನಿದರ್ಶನಗಳು ಇವೆ. ಅದೆಲ್ಲಾ ಸಾಕ್ಷಿ, ಪುರಾವೆಗಳನ್ನು ಇವರಿಗೆ ಒದಗಿಸಿ ಕೊಡಿ, ಅವರು ಕ್ರಮ ತೆಗೆದುಕೊಳ್ಳುತ್ತಾರೆ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಅವರು ಅರೆಸ್ಟ್ ಮಾಡಿದ್ದಾರೆ, ಸೀಜ್ ಮಾಡಿದ್ದಾರೆ.

ಅಧ್ಯಕ್ಷರು : ಅದಕ್ಕೆ In all these cases, we will request the Hon. Minister to initiate action.

ಶ್ರೀ ಬಿ.ಎಸ್.ಯಡಿಯೂರಪ್ಪ :- ಮಾನ್ಯ ಅಧ್ಯಕ್ಷರೆ, ಅವರು ನನಗೆ ಉತ್ತರ ಕೊಡುವಾಗ ಸೆಕೆಂಡ್ಸ್ ಬಗ್ಗೆ ಏನು ಇಲ್ಲವೆಂದು ಹೇಳಿದರು. ಆಮೇಲೆ ನನ್ನ ಹತ್ತಿರ ಪುರಾವೆ ಇದೆ ಎಂದ ಮೇಲೆ ಕೆಲವು ಪ್ರಕರಣಗಳನ್ನು ಹೇಳಿದರು. ಅಂದರೆ ಗೊತ್ತಿದ್ದು ಮುಚ್ಚಿಕೊಂಡರೆ ಯಾರುಯಾರ ಗಮನಕ್ಕೆ ತರಬೇಕು. Is it not his duty? ಸರ್ಕಾರ ನೌಕರರಿಗೆ ಸಂಬಳ ಕೊಡುವುದಿಲ್ಲವೆ? ಅವರಿಗೆ ಇವರು ಸರಿಯಾದ ಮಾಹಿತಿಯನ್ನು ಕೊಡಬೇಡವೆಂದು ಹೇಳಿದರೆ, ನಾವು ಇಲ್ಲಿ ಕುಳಿತುಕೊಂಡು ಹೇಗೆ ಕೆಲಸ ಮಾಡುವುದು.

ಅಧ್ಯಕ್ಷರು : ಅವರು ಮಾಡುವುದು ಸೆಕೆಂಡ್ಸ್ ಕಳ್ಳತನದ ವ್ಯವಹಾರ ಅವರು ಇವರಿಗೆ ಹೇಳಿ ಮಾಡುತ್ತಾರೆ?

ಶ್ರೀ ಬಿ.ಎಸ್. ಯಡಿಯೂರಪ್ಪ : ಅದಲ್ಲ, ಅವರು ಹಿಡಿದ ಕೇಸಿನ ವಿವರಗಳನ್ನು ಕೊಡುತ್ತಾ ಇಲ್ಲ.

ಅಧ್ಯಕ್ಷರು : ಮಾನ್ಯ ವಿರೋಧಪಕ್ಷದ ನಾಯಕರೆ, ನಾನು ಹೇಳುವುದೆನೆಂದರೆ ಉತ್ತರವನ್ನು ಕೊಡುವುದಕ್ಕೆ ಏನು ಇಲ್ಲವೆಂದು ಹೇಳಿದರೆ ಯಾವುದು ಅವರ ಗಮನಕ್ಕೆ ಬಂದಿಲ್ಲವೆಂದು ಹೇಳುತ್ತಾರೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ಯಾವುದು ಇಲ್ಲವೆಂದು ಹೇಳಿದ್ದಾರೆ, ಒಂದೂ ನಡೆದಿಲ್ಲವೆಂದೆ ಹೇಳುತ್ತಾರೆ.

ಅಧ್ಯಕ್ಷರು : ಅವರು ಅಥಾರಿಟಿ ವಿಜಲೆನ್ಸ ನಡೆಸುತ್ತಿರುತ್ತಾರೆ, ಅವರು ರೈಡ್ಸ ಮಾಡಿಸುವುದು ಮತ್ತೊಂದು ಮಾಡುವುದು ಮಾಡುತ್ತಿರುತ್ತಾರೆ. ಇವೆಲ್ಲ ಕೆಲಸಗಳು ಮಾಮೂಲಾಗಿ ನಡೆಯುತ್ತಿರುತ್ತವೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ಯಾವುದೂ ಇಲ್ಲವೆಂದು ಹೇಳುತ್ತಾರೆ. ಇವರ ಪ್ರಶ್ನೆಗೆ, ಮೂರು ಕೇಸುಗಳನ್ನು ಹಿಡಿದ್ದೇವೆ ಎಂದು ಹೇಳಿದ್ದಾರೆ. ಇನ್ನು ಅಂಥದ್ದು ಇದೆ ಎಂದಲೆ ನಾವು ಎಲ್ಲಿಂದ ತಂದು ಕೊಡೋಣ. ಅವರನ್ನು ರಕ್ಷಣೆ ಕೊಡುವಂತಹ ವ್ಯವಸ್ಥೆಯಾದರೆ ನಾವು ಎಲ್ಲಿಂದ ಹಿಡಿದು ಕೊಡೋಣ.

Mr. SPEAKER : He will take action.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಸನ್ಮಾನ್ಯ ಅಧ್ಯಕ್ಷರೆ, ನನ್ನದು ಒಂದು ಪ್ರಶ್ನೆ, ಇವರು ಹಿಡಿಯದಿದ್ದರೆ ಇವರ ಇಲಾಖೆಯ ಅಧಿಕಾರಿಗಳು ಮಾಹಿತಿಗಳನ್ನು, ಕೊಡುತ್ತಾರೋ ಇಲ್ಲವೊ ಅಥವಾ ಈ ಇಲಾಖೆಯ ಅಧಿಕಾರಿಗಳೇ ಅವರ ಜೊತೆಯಲ್ಲಿ ಶಾಮೀಲಾಗಿದ್ದಾರೋ ಎಂದು ನನ್ನ ನೇರವಾದಂತಹ ಆರೋಪವಾಗಿದೆ. ನಾವು ಇದರಲ್ಲಿ ಹೇಗೆ ಸತ್ಯವನ್ನು ಹುಡುಕುವುದು. ಅಲ್ಲಿ ಜೀಪ್ ಸುಟ್ಟುಹಾಕಿದ್ದಾರೆ. 20 ಲಕ್ಷ ರೂ.ಗಳ ಮಿಷನರಿಯನ್ನು ಸೀಜ್ ಮಾಡಿದ್ದಾರೆ.

ಅಧ್ಯಕ್ಷರು : ಹಾಗಾದರೆ ಆ ಜೀಪ್ ನಂಬರ್ ಕೊಡಿ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ನಾವೆ ಎಲ್ಲಾ ಕೊಡುವುದಾದರೆ ಸರ್ಕಾರ ಏಕೆ ಬೇಕು?

ಒಬ್ಬ ಮಾನ್ಯ ಸದಸ್ಯರು : ಸರ್ಕಾರ ಏಕೆ ಬೇಕು?

ಶ್ರೀ ಬಿ.ವಿ. ಶ್ರೀರಾಮರೆಡ್ಡಿ : ನಾವೆ ನಂಬರ್, ಕೇಸ್, ಸಾಕ್ಷಿ ಪುರಾವೆಗಳನ್ನು ಹಿಡಿದು ಕೊಡುವುದಾದರೆ ಸರ್ಕಾರ ಮತ್ತು ಎಕ್ಸೈಜ್ ಇಲಾಖೆ. ಏಕೆ ಬೇಕು?

ಅಧ್ಯಕ್ಷರು : ಇದು Wild goose chase ಎಂದು ಇದಕ್ಕೆ ಕರೆಯುತ್ತಾರೆ.

ಶ್ರೀ ಜಿ. ವಿ. ಶ್ರೀರಾಮರೆಡ್ಡಿ : ಆಂಧ್ರಪ್ರದೇಶದ ಪೋಲೀಸರು ಹಲವಾರು ಕೇಸಗಳನ್ನು ಬುಕ್ ಮಾಡಿದ್ದಾರೆ. ಅದಕ್ಕೆ ಅವರು ಉತ್ತರವನ್ನು ಕೊಡಲಿ.

ಶ್ರೀ ತಿಪ್ಪೇಸ್ವಾಮಿ : ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು ಹೇಳಿರುವಂತಹ ವಿಷಯದ ಬಗ್ಗೆ ನಾನು ನಮ್ಮ ಅಧಿಕಾರಿಗಳಿಗೆ ಕಟ್ಟುನಿಟ್ಟಿನ ಆದೇಶವನ್ನು ಕೊಡುತ್ತೇನೆ. ಇನ್ನು ಅವರು ಆಂಧ್ರಪ್ರದೇಶದ ಗಡಿ ಭಾಗದಲ್ಲಿ ಆಗುತ್ತಿರುವ ಸಾರಾಯಿ ಬಗ್ಗೆ ಏನು ಹೇಳಿದ್ದಾರೆ ಆ ಪ್ರಕಾರವೇನಾದರೂ ಇದ್ದರೆ ಅದಕ್ಕೆ ಮುಂದು ಹೆಚ್ಚಿನ ಗಮನಹರಿಸಿ ಅಂಥಾದ್ದು ಇನ್ನು ಮಂದೆ ಏನಾದರೂ ನಡೆದರೆ ಇದರ ಬಗ್ಗೆ ಶಿಸ್ತಿನ ಕ್ರಮವನ್ನು ತೆಗೆದುಕೊಳ್ಳುತ್ತೇನೆ.

ಶ್ರೀ ಜಿ. ವಿ. ರಾಮರೆಡ್ಡಿ : ನೀವು ಹಿಂದೆ ಇದೇ ಪ್ರಶ್ನೆಗೆ ಉತ್ತರವನ್ನು ಕೊಡುವಾಗ ಬಾರ್ಡರ್ ಏರಿಯಾದಲ್ಲಿರುವಂತಹ 10 ಕಿ.ಮೀ. ಒಳಗಡೆ ನಾವು ನಿಷೇಧ ಮಾಡುತ್ತೇವೆಂದು ತಾವು ಈ ಸದನದಲ್ಲೆ ಹೇಳಿದ್ದೀರಿ. ಅದರ ಬಗ್ಗೆ ತಾವು ಏನು ಪರಿಶೀಲನೆ ಮಾಡಿದ್ದೀರಾ? Within a radius of 10 kms from the border ನಾವು ನಿಷೇಧ ಮಾಡುತ್ತೇವೆ, ಅಂಗಡಿಗಳನ್ನು ಮುಚ್ಚುತ್ತೇವೆಂದು ಈ ಸದನದಲ್ಲಿ ಹೇಳಿದ್ದಿರಿ, ಅದರ ಬಗ್ಗೆ ಏನು ಕ್ರಮ ತೆಗೆದುಕೊಂಡಿದ್ದೀರಿ?

ಶ್ರೀ ತಿಪ್ಪೇಸ್ವಾಮಿ : ನಿಷೇಧ ಮಾಡುತ್ತೇವೆಂದು ಹೇಳಿಲ್ಲ. ಸಧ್ಯಕ್ಕೆ ಗಡಿಭಾಗದಲ್ಲಿ ಆಂಧ್ರದವರು ಆಂಧ್ರ ಗಡಿಯಲ್ಲಿ 20 ಕಿ.ಮೀ.ಅಂತರದಲ್ಲಿ ನೀವು ಈ ಪಾನ ಮಾರಾಟವನ್ನು ನಿಷೇಧ ಮಾಡಿ ಎಂದು ಕೇಳಿದ್ದಾರೆ. ನಾವು ಪರಿಶೀಲನೆ ಮಾಡುತ್ತೇವೆಂದು ಹೇಳಿದ್ದೇವೆಯೇ ಹೊರತು ನಿಷೇಧ ಮಾಡುತ್ತೇವೆಂದು ನಾವು ಆಶ್ವಾಸನೆಯನ್ನು ಕೊಟ್ಟಿಲ್ಲ.

ಶ್ರೀ ಜಿ. ವಿ. ಶ್ರೀರಾಮರೆಡ್ಡಿ : ಇದರ ಬಗ್ಗೆ ಏನು ಪರಿಶೀಲನೆಯಾಗಿದೆ ಎಂದು ಕೇಳಿದೆ.

ಅಧ್ಯಕ್ಷರು : ಪರಿಶೀಲನೆಯಲ್ಲಿದೆ ಅಷ್ಟೆ,.

ಶ್ರೀ ಎಂ. ನಾರಾಯಣಸ್ವಾಮಿ : ಮಾನ್ಯ ಅಧ್ಯಕ್ಷರೆ, ಶ್ರೀ ಶ್ರೀರಾಮರೆಡ್ಡಿಯವರು ಅಬ್ಕಾರಿ ವಿಷಯದಲ್ಲಿ ಹೇಳಿದಹಾಗೆ ನಮ್ಮ ಜಿಲ್ಲೆಯ ಬಾರ್ಡರ್, ತಾಲ್ಲೂಕುಗಳಿಂದ ಬಹಳಷ್ಟು ಸಾರಾಯಿ ಆಂಧ್ರ ಪ್ರದೇಶಕ್ಕೆ ಹೋಗುತ್ತಾ ಇದೆ. ಕಾರು, ಜೀಪುಗಳನ್ನು ಹಿಡಿದು ಕೊಡಬೇಕೆಂಬ ಪರಿಸ್ಥಿತಿ ಸರ್ಕಾರದಲ್ಲಿ ಇಲ್ಲ. ಆದರೆ ಕಟ್ಟುನಿಟ್ಟಾದ ಅಧಿಕಾರಿಗಳನ್ನು ಹಾಕಿ ಈ ಕೆಲಸವನ್ನು ಮಾಡಿಸಬೇಕು. ಅದನ್ನು ಬಿಟ್ಟು ನಮಗೆ ಮಾಹಿತಿ ಬಂದಿಲ್ಲವೆಂದು ಹೇಳಿದರೆ ಒಂದು ದಿವಸಕ್ಕೆ ಹಲವಾರು ಲಕ್ಷ ರೂಪಾಯಿಗಳು ನಮ್ಮ ಸರ್ಕಾರಕ್ಕೆ ಬರುವಂತಹ ಟ್ಯಾಕ್ಸ ಕಳ್ಳತನವಾಗುತ್ತಿದೆ. ನೀವು ಇದನ್ನು ನಿಲ್ಲಿಸದಿದ್ದರೆ, ಇದು ಇನ್ನು ಜಾಸ್ತಿಯಾಗುತ್ತದೆ. ಆದುದರಿಂದ ಸರ್ಕಾರಕ್ಕೆ ನಾನು ಕೇಳಿಕೊಳ್ಳುವುದೆನೆಂದರೆ ಮಾನ್ಯ ಶ್ರೀರಾಮರೆಡ್ಡಿಯವರು ಹೇಳಿದ ಹಾಗೆ ಇಲ್ಲಿ ಹೆಚ್ಚಿಗೆ ಸಿಬ್ಬಂದಿ ಹಾಕಿ, ಕಂಟ್ರೋಲ್ ಮಾಡದಿದ್ದರೆ ಬಹಳಷ್ಟು ಸಾರಾಯಿ ಅಲ್ಲೆ ಹೋಗುತ್ತದೆ. ನಮ್ಮ ಸರ್ಕಾರಕ್ಕೆ ಬರುವಂತಹ ಹಣ ಕಡಿಮೆಯಾಗುತ್ತದೆ ಎಂಬ ಮಾತನ್ನು ಹೇಳುತ್ತೇನೆ.

ಶ್ರೀ ತಿಪ್ಪೇಸ್ವಾಮಿ : ಮಾನ್ಯ ಸದಸ್ಯರ ಭಾವನೆಗೆ ನಾನು ಸ್ಪಂದಿಸಿ ಪ್ರಾಮಾಣಿಕವಾದಂತಹ ಪ್ರಯತ್ನವನ್ನು ಮಾಡುತ್ತೇನೆ.

ಶ್ರೀ ಆರ್. ಶ್ರೀನಿವಾಸ್ : ಮಾನ್ಯ ಅಧ್ಯಕ್ಷರೆ. ಮಾನ್ಯ ಶ್ರೀ ರಾಮರೆಡ್ಡಿಯವರು ಹೇಳಿದ ಹಾಗೆ ನನ್ನ ಕ್ಷೇತ್ರ ಮುಳಬಾಗಿಲು ಕ್ಷೇತ್ರದಲ್ಲಿ ಸುಮಾರು 20 ಲಕ್ಷ ರೂಪಾಯಿಗಳ ಮಿಷನರಿಯನ್ನು ಸರ್ಕಾರದವರು ಸೀಜ್ ಮಾಡಿದ್ದಾರೆ. ಈಗಾಗಲೇ ಸರ್ಕಾರದವರ ಗಮನಕ್ಕೂ ತಂದಿದ್ದೇನೆ. ಅವರ ಮೇಲೆ ಸೂಕ್ತವಾದಂತಹ ಕ್ರಮವನ್ನು ತೆಗೆದುಕೊಳ್ಳಿ ಎಂದು ಹೇಳಿ ಒಂದು ವರ್ಷವಾದರೂ ಸಂಬಂಧಪಟ್ಟಂತಹ ಇಲಾಖೆಯವರು ಯಾವ ಕ್ರಮವನ್ನು ತೆಗೆದುಕೊಂಡಿಲ್ಲ. ಈಗಲೂ ಆ ಸರ್ಕಲ್ ಇನಸ್ಪೆಕ್ಟರ್ ಮತ್ತು ಎಕ್ಸೈಜ್ ಇನಸ್ಪೆಕ್ಟರ್ ಅಲ್ಲೆ ಇದ್ದಾರೆ. ನಾನು ಒಂದು ವರ್ಷದಿಂದ ಹೇಳುತ್ತಿದ್ದೇನೆ ಇವರ ಮೇಲೆ ಸೂಕ್ತವಾದಂತಹ ಕ್ರಮವನ್ನು ತೆಗೆದುಕೊಳ್ಳಿ ಎಂದು, ಅದು ಅಲ್ಲದೆ ಗಡಿ ಪ್ರದೇಶದಲ್ಲಿ ಒಂದು ಬ್ರಾಂದಿ ಇದ್ದು ಸುಮಾರು ಜನರು ಬಂದು ಸ್ಥಳೀಯ ಸಾರ್ವಜನಿಕರಿಗೆ ತೊಂದರೆಯನ್ನು ಕೊಡುತ್ತಿದ್ದಾರೆ. ದಯಮಾಡಿ ಅಂತಹ ಅಂಗಡಿಗಳನ್ನು ಮುಚ್ಚಬೇಕೆಂದು ಕೇಳಿಕೊಳ್ಳುತ್ತೇನೆ.

ಅಧ್ಯಕ್ಷರು : ಗಡಿ ಅಲ್ಲ, ಅವು ದಾವೂದ್‌ಗಳಾಗಿ ಬಿಟ್ಟಿದೆ. ನಮ್ಮ ಊರು ಗಡಿ.

ಶ್ರೀ ತಿಪ್ಪೇಸ್ವಾಮಿ : ಮಾನ್ಯ ಅಧ್ಯಕ್ಷರೆ, ಗಡಿ ಭಾಗದಲ್ಲಿ ಆಂದ್ರಪ್ರದೇಶದಿಂದ ಬಂದು ಕುಡಿಯುವಂಥಾದ್ದು ಸತ್ಯಾಂಶ.

ಅಧ್ಯಕ್ಷರು : ನಮ್ಮ ಊರು ಮೂರು ಕಿ.ಮೀ. ದೂರಕ್ಕೆ ಗಡಿ ಭಾಗ ಅಲ್ಲವೆ, ಈಗ ಅವು ಹಾಲಿವುಡ್ ಆಗಿ ಹೋಗಿದೆ. ಅದನ್ನು ಏಕೆ ಚರ್ಚೆ ಮಾಡುತ್ತೀರಿ, ಅದನ್ನು ಬಿಡಿ.

ಗಂಡೋರಿ ನಾಲಾ ನಿರ್ಮಾಣದ ಕಾಮಗಾರಿ

790 - ಶ್ರೀ ರೇವುನಾಯಕ್ ಬೆಳಮಗಿ (ಕಮಲಾಪುರ) : ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) *ಗುಲ್ಬರ್ಗಾ ಜಿಲ್ಲೆಯಲ್ಲಿ ಕಮಲಾಪುರದಲ್ಲಿ ಗಂಡೋರಿ ನಾಲಾ ಯೋಜನೆಯ ಕಾಮಗಾರಿ ಕೆಲಸ 2 ವರ್ಷದಿಂದ ನಿಂತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?*

ಆ) *ಬಂದಿದ್ದಲ್ಲಿ ಈ ಯೋಜನೆಯನ್ನು ನಿಲ್ಲಿಸಲು ಕಾರಣವೇನು? ಇದನ್ನು ಪುನಃ ಯಾವಾಗ ಪ್ರಾರಂಭಿಸಲಾಗುವುದು ಹಾಗೂ ಪೂರ್ಣಗೊಳಿಸುವ ಅವಧಿಯೆನ್ನಾದರೂ ನಿಗಧಿಗೊಳಿಸಲಾಗಿದೆಯೇ?*

ಇ) *ಈ ಯೋಜನೆಗೆ ಸರ್ಕಾರ ಬಿಡುಗಡೆ ಮಾಡಿದ ಯೋಜನೆಯ ಅಂದಾಜು ಮೊತ್ತವೆಷ್ಟು ಹಾಲಿ ಎಷ್ಟು ಹಣ ಬಿಡುಗಡೆ ಮಾಡಲಾಗಿದೆ?*

ಶ್ರೀ ಹೆಚ್. ಡಿ. ದೇವೇಗೌಡ (ಮುಖ್ಯಮಂತ್ರಿಗಳು) :

ಅ) ಹೌದು.

ಆ) ಕರ್ನಾಟಕ ರಾಜ್ಯ ನಿರ್ಮಾಣ ನಿಗಮಕ್ಕೆ ವಹಿಸಿದ ಕಾಮಗಾರಿಗಳನ್ನು ಹಿಂಪಡೆಯುವಂತೆ ತೆಗೆದುಕೊಂಡ ಸರ್ಕಾರದ ತೀರ್ಮಾನದನುಸಾರ ಸದರಿ ಕಾಮಗಾರಿಗಳನ್ನು ಸಹ ನಿಲ್ಲಿಸಲಾಯಿತು.